# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/3349/2014/ಅ.ನಿ.ವಿ–4

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು–560 001.
Email ID: kla-are4@nic.in
ದಿನಾಂಕ 12.01.2016.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರಡಿಯ ವರದಿ

**ವಿಷಯ:** ಬಳ್ಳಾರಿ ಜಿಲ್ಲೆಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಶ್ರೀ ಕೆ.ಎಸ್.ರಂಗನಾಥ್, (2) ರಾಯಚೂರಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ಬಿ.ವಿ.ಹಾಲಾಪ್ ಮತ್ತು (3) ರಾಯಚೂರಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ಚಂದ್ರಕಾಂತ್ ಚವ್ಹಾಣ್‌ರವರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ದುರ್ವರ್ತನೆ ಎಸಗಿರುವ ಬಗ್ಗೆ ನಡವಳಿ ಕುರಿತು.

– * –

ರಾಯಚೂರು ಜಿಲ್ಲೆ ದೇವದುರ್ಗ ಪಟ್ಟಣದ ಗೌತಮ್ ಓಣಿಯ ಮನೆ ಸಂಖ್ಯೆ.6–1–54ರ ನಿವಾಸಿ ಶ್ರೀ ಅಳ್ಳಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುವ)ರವರು ರಾಯಚೂರಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ರಾಯಚೂರು ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರ ವಿರುದ್ಧ (ಇನ್ನು ಮುಂದೆ "1ನೇ ಎದುರುದಾರರು" ಎಂದು ಕರೆಯಲ್ಪಡುವ) ರವರ ವಿರುದ್ಧ ಈ ದೂರನ್ನು ಸಲ್ಲಿಸಿದ್ದು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ.9ರಡಿ ತನಿಖೆಗೆ ಕೈಗೆತ್ತಿಕೊಂಡಿದ್ದಿದೆ.

2. <u>ದೂರಿನ ಸಂಕ್ಷಿಪ್ತ ಆಪಾದನೆಗಳು</u>:-

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ರಾಯಚೂರು ಉಪವಿಭಾಗವು ದೇವದುರ್ಗ ಪಟ್ಟಣಕ್ಕೆ 2012-13ರ ದರಪಟ್ಟಿಯ ಪ್ರಕಾರ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿಗೆ ಸರ್ಕಾರದಿಂದ ರೂ.3834.00 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಅಂದಾಜನ್ನು 2 ಭಾಗಗಳಾಗಿ ವಿಂಗಡಿಸಿ ಟೆಂಡರ್ ಕರೆದಿದ್ದು, ಆ ಪೈಕಿ ಒಂದು ಭಾಗದ ಕಾಮಗಾರಿಯಾದ ಮೂಲ ಸ್ಥಾವರ (ಇನ್‌ಟೇಕ್‌ವೆಲ್, ಕನೆಕ್ಟಿಂಗ್‌ಮೇನ್ ಮತ್ತು ಜಾಕವೆಲ್) ನಿರ್ಮಿಸುವುದಾಗಿದ್ದು, ಅದಕ್ಕೆ 29.80 ಕಿ.ಮೀ. ಏರು ಕೊಳವೆಯ ಮಾರ್ಗ, ಜಲ ಶುದ್ಧೀಕರಣ ಘಟಕ ನಿರ್ಮಿಸುವ ಕಾಮಗಾರಿಗೆ ಸಿದ್ಧಪಡಿಸಿದ ಅಂದಾಜು ಪಟ್ಟಿಯು ರೂ.22,19,23,814/- ಆಗಿದ್ದು, ಅದನ್ನು Sheth and Sura Engineer's Pvt. Ltd., "Aqua House", 263/1, Singhagad Road, Near Parvati Over Bridge, Pune ರವರಿಗೆ ರೂ.27,63,78,458/- ಗಳ ಟೆಂಡರ್‌ಗೆ ಅಂದರೆ 2013-14ರ ದರಪಟ್ಟಿಯ ಶೇ.24.54ರ ಹೆಚ್ಚಿನ ಮೊತ್ತಕ್ಕೆ ಅನುಮೋದನೆ ನೀಡಿದ್ದು, ಕಾಮಗಾರಿಯನ್ನು ಆರಂಭಿಸಲು ದಿನಾಂಕ 13.03.2013ರ ವಹಿಸಿಕೊಟ್ಟಿದ್ದು, ಕರಾರಿನ ಪ್ರಕಾರ ಗುತ್ತಿಗೆದಾರರು ದಿನಾಂಕ 18.09.2014ರಂದು ಕಾಮಗಾರಿಯನ್ನು ನಿರ್ದಿಷ್ಟಪಡಿಸಿದ 18 ತಿಂಗಳಲ್ಲಿ ಮುಕ್ತಾಯಗೊಳಿಸಬೇಕಾಗಿದ್ದು, ಆದರೆ, ಗುತ್ತಿಗೆದಾರರು ಕಾಮಗಾರಿಯನ್ನು ಮುಕ್ತಾಯಗೊಳಿಸಿಲ್ಲ. ಆದಾಗ್ಯೂ ಸಹ ಎದುರುದಾರರು ಗುತ್ತಿಗೆದಾರರೊಂದಿಗೆ ಶ್ಯಾಮೀಲಾಗಿ ಗುತ್ತಿಗೆದಾರರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳದೇ, ದಂಡ ಹಾಕದೇ, ಲೈಸೆನ್ಸ್ ರದ್ದುಪಡಿಸದೇ ಮತ್ತು ಕಪ್ಪು ಪಟ್ಟಿಗೆ ಸೇರಿಸದೇ, ತಮಗೂ ಮತ್ತು ಗುತ್ತಿಗೆದಾರರಿಗೂ ಲಾಭ ಮಾಡಿಕೊಳ್ಳುತ್ತಿದ್ದು, ಸಾರ್ವಜನಿಕರ ಹಣ ಪೋಲಾಗದಂತೆ ತಡೆಗಟ್ಟಿ ವಿಳಂಬ ಮಾಡಿದ ಗುತ್ತಿಗೆದಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

3. ದೂರಿನ ಮೇಲೆ 1ನೇ ಎದುರುದಾರರ ಆಕ್ಷೇಪಣೆಯನ್ನು ಕೇಳಲಾಗಿ, ಅವರು ದೇವದುರ್ಗ ಪಟ್ಟಣಕ್ಕೆ ಗೂಗಲ್ ಬ್ಯಾರೇಜ್‌ನ ಹಿನ್ನೀರಿನಿಂದ ಕುಡಿಯುವ ನೀರು ಸರಬರಾಜು ಯೋಜನೆಗೆ ಸರ್ಕಾರದಿಂದ ರೂ.3834.00 ಲಕ್ಷಗಳು ಮಂಜೂರಾಗಿರುವ ಬಗ್ಗೆ ಒಪ್ಪಿಕೊಳ್ಳುತ್ತಾ, ಅಂದಾಜುಪಟ್ಟಿಯಲ್ಲಿ ಸೇರಿಸಿರುವ ವಿವಿಧ Componentಗಳ ವಿವರಣೆಯನ್ನು ನೀಡುತ್ತಾ, ಅವರ ಆಕ್ಷೇಪಣೆಗೆ ಅನುಬಂಧ-2ರಡಿ ಲಗತ್ತಿಸಿದ ಕಾರಣಗಳಿಂದ ಅಂದರೆ, ಭಾರೀ ಮಳೆಯ

ಕಾರಣ ನೆರೆ ಹಾವಳಿಯಾಗಿದ್ದು, ನೀರು ಶುದ್ಧೀಕರಣ ಘಟಕಕ್ಕೆ ಭೂಮಿ ಲಭ್ಯವಾಗದ ಕಾರಣ, ನೀರನ್ನು ಏರು ಕೊಳವೆಯ ಮೂಲಕ ಕೊಂಡೊಯ್ಯಬೇಕಾಗಿದ್ದು, ಆ ಮಧ್ಯದಲ್ಲಿ ಖಾಸಗಿ ಜಮೀನಿನ ಮಾಲೀಕರು ತಕರಾರು ಒಡ್ಡಿದ ಕಾರಣ, ಮಾರ್ಗಮಧ್ಯದಲ್ಲಿ ಭತ್ತದ ಬೆಳೆ ಇದ್ದು, ರಸ್ತೆಯ ಅಂಚಿನ ಬಗ್ಗೆ ತಕರಾರಿದ್ದು, 5 ಗ್ರಾಮಗಳ ಮೂಲಕ ನೀರನ್ನು ಕೊಳವೆಯ ಮೂಲಕ ಕೊಂಡೊಯ್ಯಬೇಕಾಗಿದ್ದು, ಆ ಮಧ್ಯದಲ್ಲಿ ವಿದ್ಯುತ್ ಕಂಬಗಳು, ಅಂಗಡಿಗಳು, ನೀರಿನ ಪೈಪುಗಳು ಇತ್ಯಾದಿಗಳು ಇದ್ದ ಕಾರಣ, ಕರಾರಿನ ಪ್ರಕಾರ 18 ತಿಂಗಳಿನಲ್ಲಿ ಕಾಮಗಾರಿಯನ್ನು ಮುಕ್ತಾಯಗೊಳಿಸಲು ಸಾಧ್ಯವಾಗಲಿಲ್ಲವೆಂದು ಗುತ್ತಿಗೆದಾರರು ದಿನಾಂಕ 31.05.2015ರವರೆಗೆ ಸಮಯ ಕೋರಿರುತ್ತಾರೆಂತಲೂ, ಈ ಸಂಬಂಧ ಗುತ್ತಿಗೆದಾರರಿಗೆ ಲಾಭ ಮಾಡಿಕೊಳ್ಳುವ ಯಾವುದೇ ಉದ್ದೇಶವಿಲ್ಲವಾಗಿದ್ದು, ಕಾಮಗಾರಿಯನ್ನು ಶೀಘ್ರವಾಗಿ ಮುಗಿಸಬೇಕೆಂದು ಗುತ್ತಿಗೆದಾರರಿಗೆ ಸೂಚನೆ ಕೊಡಲಾಗಿದೆ ಎಂಬ ವಿವರಣೆಗಳೊಂದಿಗೆ ಆಕ್ಷೇಪಣೆ ಸಲ್ಲಿಸಿರುತ್ತಾರೆ.

4. ನಂತರ ಗೌರವಾನ್ವಿತ ಉಪಲೋಕಾಯುಕ್ತರ ಆದೇಶಾನುಸಾರ ದೂರನ್ನು ನಮ್ಮ ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗದ ಮುಖ್ಯ ಅಭಿಯಂತರರಿಗೆ ಕಳುಹಿಸಿ ತನಿಖೆ ಮಾಡಿ ವರದಿ ನೀಡಲು ಕಳುಹಿಸಿಕೊಡಲಾಗಿ, ಅವರು ತಮ್ಮ ಅಧೀನ ಅಧಿಕಾರಿಯಾದ ಕಾರ್ಯಪಾಲಕ ಅಭಿಯಂತರರಿಗೆ (ಇನ್ನು ಮುಂದೆ "ತನಿಖಾಧಿಕಾರಿ" ಎಂದು ಕರೆಯಲ್ಪಡುವ) ತನಿಖೆ ಮಾಡಿ ವರದಿ ಸಲ್ಲಿಸಲು ವಹಿಸಿಕೊಟ್ಟಿದ್ದು, ತನಿಖಾಧಿಕಾರಿಗಳು ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಭಾಗೀಯ ಕಛೇರಿ, ಬಳ್ಳಾರಿ ಇವರೊಂದಿಗೆ ಪತ್ರ ವ್ಯವಹಾರ ಮಾಡಿ ದಾಖಲೆಗಳನ್ನು ತರಿಸಿಕೊಂಡಿದ್ದು, ಕೊನೆಯ ಬಾರಿಗೆ ದಿನಾಂಕ 26.06.2015ರಂದು ತರಿಸಿಕೊಂಡ ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬಳ್ಳಾರಿ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಶ್ರೀ ಕೆ.ಎಸ್.ರಂಗನಾಥ್‌ರವರು ದಿನಾಂಕ 31.05.2015ರೊಳಗೆ ಕಾಮಗಾರಿ ಯನ್ನು ಪೂರ್ಣಗೊಳಿಸಲು ವಿಫಲರಾದ ಗುತ್ತಿಗೆದಾರರಿಗೆ ಸೂಕ್ತ ದಂಡ ವಿಧಿಸದೇ, ರಾಯಚೂರು ಜಿಲ್ಲೆಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ಬಿ.ವಿ.ಹಾಲಾಪ್‌ರವರು ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ವಿಫಲರಾದ ಗುತ್ತಿಗೆದಾರರಿಗೆ ಸೂಕ್ತ ನಿರ್ದೇಶನ ನೀಡದೇ ಮತ್ತು ಆ ಬಗ್ಗೆ ಕಾರ್ಯಪಾಲಕ ಅಭಿಯಂತರರಿಗೆ ಮಾಹಿತಿಯನ್ನು

ನೀಡದೇ ಮತ್ತು ರಾಯಚೂರು ಜಿಲ್ಲೆಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಉಪವಿಭಾಗದ ಮತ್ತೊಬ್ಬ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ಚಂದ್ರಕಾಂತ್ ಚವ್ಹಾಣ್‌ರವರು ಕಾಮಗಾರಿಯ ಅಂದಾಜುಪಟ್ಟಿ ಸಿದ್ಧಪಡಿಸುವ ಪೂರ್ವದಲ್ಲಿ ಕಾಮಗಾರಿಯ ಅನುಷ್ಠಾನಕ್ಕೆ ಅಗತ್ಯವಾದ ಸ್ಥಳ ಸೌಲಭ್ಯ ಇಲ್ಲದಿರುವುದನ್ನು ಗಣನೆಗೆ ತೆಗೆದುಕೊಳ್ಳದೇ, ಅಂದಾಜುಪಟ್ಟಿಯನ್ನು ತಯಾರಿಸಿದ್ದು, ಈ ಮೂರು ಅಧಿಕಾರಿಗಳು ಕಾಮಗಾರಿಯ ವಿಳಂಬಕ್ಕೆ ಹೊಣೆಗಾರರಾಗಿರುತ್ತಾರೆಂದು ವರದಿ ನೀಡಿರುತ್ತಾರೆ

5. ತನಿಖಾ ವರದಿಯ ಪ್ರಕಾರ ಈ ಮೂರು ಅಧಿಕಾರಿಗಳನ್ನು ಅನುಕ್ರಮವಾಗಿ 2, 3 ಮತ್ತು 4ನೇ ಎದುರುದಾರರೆಂದು ಸೇರ್ಪಡೆ ಮಾಡಿಕೊಂಡು, ತನಿಖಾ ವರದಿಯ ಪ್ರತಿಯನ್ನು ಕಳುಹಿಸಿ, ಅವರ ಉತ್ತರ/ಆಕ್ಷೇಪಣೆಯನ್ನು ಕೇಳಲಾಗಿ,

(ಅ) 2ರಿಂದ 4ನೇ ಎದುರುದಾರರು ಪ್ರತ್ಯೇಕ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾಗ್ಯೂ ಸಹ ಬಹುಪಾಲು ಒಂದೇ ತೆರನಾದ ವಿವರಣೆ ನೀಡುತ್ತಾ, ದೇವದುರ್ಗ ಪಟ್ಟಣಕ್ಕೆ ಕುಡಿಯುವ ನೀರನ್ನು ಗೂಗಲ್ ಹಳ್ಳಿಯ ಹತ್ತಿರ ಜಾಕವೆಲ್ ಮತ್ತು ಕೂಡು ರಸ್ತೆ ನಿರ್ಮಾಣಕ್ಕೆ ಗೂಗಲ್ ಸೀಮೆಯ ಸರ್ವೇ ನಂ.48ರಲ್ಲಿ 2.20 ಎಕರೆ, ದೇವದುರ್ಗ ಪಟ್ಟಣದ ಶಂಭುಲಿಂಗನ ಗುಡ್ಡದ ಮೇಲೆ ಜಲ ಶುದ್ಧೀಕರಣ ಘಟಕ ನಿರ್ಮಾಣಕ್ಕೆ ದೇವದುರ್ಗ ಸೀಮೆಯ ಸರ್ವೇ ನಂ.298ರಲ್ಲಿ 4 ಎಕರೆ ಭೂಮಿ ಬೇಕಾಗಿದ್ದು, ದೇವದುರ್ಗ ಪುರಸಭೆಯ ಮುಖ್ಯಾಧಿಕಾರಿಗಳು ಭೂಮಿಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ಭೂಸ್ವಾಧೀನಪಡಿಸಿಕೊಂಡು ಮಂಡಳಿಗೆ ಕೊಡಬೇಕಾಗಿದ್ದು, ಆ ನಿಟ್ಟಿನಲ್ಲಿ ಭೂಮಾಲೀಕರು ಒಪ್ಪಲಾರದ ಕಾರಣ, ಅಲ್ಲದೇ ಮೂಲಸ್ಥಳದಿಂದ ನೀರನ್ನು ದೇವದುರ್ಗ ಪಟ್ಟಣಕ್ಕೆ ಕೊಂಡೊಯ್ಯಲು 30 ಕಿ.ಮೀ ಅಂತರದಲ್ಲಿ 5 ಹಳ್ಳಿಗಳು ಇದ್ದು, ರಸ್ತೆಯ ಇಕ್ಕೆಡೆಯಲ್ಲಿ ಭತ್ತದ ಬೆಳೆ, ಖಾಸಗಿಯವರ ಮನೆ, ಅಂಗಡಿ ಮುಂಗಟ್ಟು, ಸಾರ್ವಜನಿಕ ಸ್ವತ್ತುಗಳು, ವಿದ್ಯುತ್ ಲೈನು, ನೀರು ಸರಬರಾಜು ಕೊಳವೆ, ಕಲ್ಲು ಬಂಡೆಗಳು ಇತ್ಯಾದಿಗಳು ಬಂದಿದ್ದು, ಜಿಲ್ಲಾಧಿಕಾರಿಗಳ ಮಧ್ಯಸ್ಥಿಕೆಯಿಂದ ಜಮೀನನ್ನು ಬಿಡಿಸಿಕೊಳ್ಳಲು ನಡೆದ ಪ್ರಯತ್ನ ಮಾಡುವಲ್ಲಿ ಆದ ವಿಳಂಬ, ಭತ್ತದ ಬೆಳೆ ಇದ್ದ ಕಾರಣ ಕಟಾವಾಗುವವರೆಗೆ ಪೈಪ್‌ಲೈನ್ ಹಾಕಲು ತೊಂದರೆಯಾದ ಕಾರಣ ವಿಳಂಬವಾಗಿದ್ದು, ಆ

ಬಗ್ಗೆ ಮಾಡಿದ 112 ಪತ್ರ ವ್ಯವಹಾರಗಳ 2 ಅನುಬಂಧಗಳನ್ನು ನೀಡುತ್ತಾ, ತನಿಖೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

6. <u>ಕಡತವನ್ನು ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಕಂಡುಬಂದ ಅಂಶಗಳೆಂದರೆ</u>:-

(ಅ) 2ನೇ ಎದುರುದಾರರಾದ ಶ್ರೀ ಕೆ.ಎಸ್.ರಂಗನಾಥ್‌ರವರು ದಿನಾಂಕ 18.12.2014ರಿಂದ ಈತಹಲ್‌ವರೆಗೆ ಬಳ್ಳಾರಿಯ ವಿಭಾಗದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಕಾರ್ಯಪಾಲಕ ಅಭಿಯಂತರರಾಗಿ ಕೆಲಸ ಮಾಡಿಕೊಂಡಿದ್ದು, ದಿನಾಂಕ 18.09.2014ಕ್ಕೆ ಮುಗಿಸಬೇಕಾಗಿದ್ದ ಕಾಮಗಾರಿಗೆ ದಿನಾಂಕ 31.05.2015ರವರೆಗೆ ಕಾಲಾವಧಿ ವಿಸ್ತರಣೆ ಮಾಡುವಾಗ ಮತ್ತು ಈತಹಲ್‌ವರೆಗೆ ಕಾಮಗಾರಿ ಮುಗಿಸಲು ವಿಫಲರಾದ ಗುತ್ತಿಗೆದಾರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪವೆಸಗಿರುತ್ತಾರೆ;

(ಆ) 3ನೇ ಎದುರುದಾರರಾದ ಶ್ರೀ ಬಿ.ವಿ.ಹಾಲಾಪ್‌ರವರ ರಾಯಚೂರಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಉಪವಿಭಾಗದಲ್ಲಿ ದಿನಾಂಕ 19.03.2013ರಿಂದ ಈತಹಲ್‌ವರೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕೆಲಸ ಮಾಡಿಕೊಂಡಿದ್ದು, ಕರಾರಿನ ಪ್ರಕಾರ ದಿನಾಂಕ 18.09.2014ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿದ್ದ ಗುತ್ತಿಗೆದಾರರು ಈಹತಲ್‌ವರೆಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲರಾಗಿದ್ದಾಗ್ಯೂ ಸಹ ಕರಾರಿನ ಉಲ್ಲಂಘನೆಯಾಗಿರುವ ಬಗ್ಗೆ ಗುತ್ತಿಗೆದಾರರಿಗೆ ಸೂಕ್ತ ತಿಳುವಳಿಕೆ ನೀಡಿ, ಅವರ ವಿರುದ್ಧ ಕ್ರಮ ಕೈಗೊಳ್ಳಲು 2ನೇ ಎದುರುದಾರರಿಗೆ ವರದಿ ಮಾಡದೇ ಕರ್ತವ್ಯ ಲೋಪವೆಸಗಿರುತ್ತಾರೆ;

(ಇ) 4ನೇ ಎದುರುದಾರರಾದ ಶ್ರೀ ಚಂದ್ರಕಾಂತ್ ಚವ್ಹಾಣ್‌ರವರು ರಾಯಚೂರಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಉಪವಿಭಾಗದಲ್ಲಿ ದಿನಾಂಕ 19.03.2013ರಿಂದ ಈತಹಲ್‌ವರೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕೆಲಸ ಮಾಡಿಕೊಂಡಿದ್ದು, ದೇವದುರ್ಗ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಕಾಮಗಾರಿಗೆ ಅಂದಾಜುಪಟ್ಟಿ ತಯಾರಿಸುವ ಪೂರ್ವದಲ್ಲಿ

ಕಾಮಗಾರಿಯ ಅನುಷ್ಠಾನಕ್ಕೆ ಅಗತ್ಯವಾದ ಸ್ಥಳ ಸೌಲಭ್ಯ ಇಲ್ಲದೇ ಇರುವ ಬಗ್ಗೆ ಗಣನೆಗೆ ತೆಗೆದುಕೊಳ್ಳದೇ, ಅಂದಾಜುಪಟ್ಟಿಯನ್ನು ತಯಾರಿಸಿ, ಕಾಮಗಾರಿಯ ವಿಳಂಬಕ್ಕೆ ಹೊಣೆಗಾರರಾಗುವ ಮೂಲಕ ಕರ್ತವ್ಯ ಲೋಪವೆಸಗಿರುತ್ತಾರೆ.

7. 2ರಿಂದ 4ನೇ ಎದುರುದಾರರ ವಿರುದ್ಧದ ತನಿಖೆಯನ್ನು ಕೈಬಿಡಲು ತನಿಖಾ ವರದಿಗೆ ಸಲ್ಲಿಸಿರುವ ಉತ್ತರ/ಆಕ್ಷೇಪಣೆಯು ಸಮಂಜಸ/ಸಮಾಧಾನಕರವಾಗಿಲ್ಲ.

8. 1ನೇ ಎದುರುದಾರರನ್ನು ಕೇವಲ ಪದನಾಮದ ಮೂಲಕ ಎದುರುದಾರನ್ನಾಗಿಸಿದ್ದು, 3 ಮತ್ತು 4ನೇ ಎದುರುದಾರರು ಸದರಿ ಕಾಮಗಾರಿಗೆ ಅಂದಾಜು ಪಟ್ಟಿ ಮತ್ತು ಕಾಮಗಾರಿಯ ಅನುಷ್ಠಾನದ ಕಾಲಕ್ಕೆ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿದ್ದು, 2ನೇ ಎದುರುದಾರರು ಕಾರ್ಯಪಾಲಕ ಅಭಿಯಂತರರಾಗಿದ್ದು, ಈ ಮೂರೂ ಜನರು ಕರ್ತವ್ಯಲೋಪವೆಸಗಿದ್ದು, 1ನೇ ಎದುರುದಾರರು ಅನಗತ್ಯ ಎದುರುದಾರರಾಗಿದ್ದು ಅಲ್ಲದೇ, ತನಿಖಾಧಿಕಾರಿಗಳು 1ನೇ ಎದುರುದಾರರ ವಿರುದ್ಧ ನಿರ್ದಿಷ್ಟ ಆಪಾದನೆ ಮಾಡದೇ, 2ರಿಂದ 4ನೇ ಎದುರುದಾರರ ವಿರುದ್ಧ ಆಪಾದನೆ ಮಾಡಿರುವ ಕಾರಣ, 1ನೇ ಎದುರುದಾರರ ವಿರುದ್ಧ ವರದಿ ಮಾಡದೇ 2ರಿಂದ 4ನೇ ಎದುರುದಾರರ ವಿರುದ್ಧ ವರದಿ ಮಾಡಲಾಗಿದೆ.

9. 2, 3 ಮತ್ತು 4ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು ಅವರ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಸಂಪೂರ್ಣ ನಿಷ್ಠೆ ಹೊಂದದೇ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ನಿಯಮ 3 (1) (i)ರಿಂದ (iii)ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 2, 3 ಮತ್ತು 4ನೇ ಎದುರುದಾರರ ವಿರುದ್ಧ ಶಿಸ್ತು ನಡವಳಿ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮ 1957ರ ನಿಯಮ 14-ಎ ರನ್ವಯ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರನ್ವಯ ಪ್ರದತ್ತವಾದ ಅಧಿಕಾರದಡಿ ಈ ಮೂಲಕ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4)ರ ಪ್ರಕಾರ ಶಿಸ್ತು ಪ್ರಾಧಿಕಾರವು 2, 3 ಮತ್ತು 4ನೇ ಎದುರುದಾರರ ವಿರುದ್ಧ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ಸ್ವೀಕೃತವಾದ ದಿನಾಂಕದಿಂದ ಮೂರು **ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಸೂಚಿಸಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

12/1/2016

**(ನ್ಯಾಯಮೂರ್ತಿ ಎನ್.ಆನಂದ)**
12/1/2016
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.